

# ಎನ್‌ಜಿಎಸ್ ಕ್ರಾಂತಿ

## ರೋಗ ಪತ್ತೆಯಲ್ಲಿ ಆಮೂಲಾಗ್ರ ಬದಲಾವಣೆ

**ಕೆಲವು ಪ್ರಕರಣಗಳಲ್ಲಿ ರೋಗ ಯಾವುದೆಂದು ಪತ್ತೆ ಹಚ್ಚುವುದೇ ವೈದ್ಯರಿಗೆ ಕಬ್ಬಿಣದ ಕಡಲೆಯಾಗುತ್ತಿದೆ. ಎಷ್ಟೇ ಪ್ರಯತ್ನಿಸಿದರೂ, ಯಾವುದೇ ಪರೀಕ್ಷೆಗಳನ್ನು ನಡೆಸಿದರೂ ವಿಫಲವಾಗುತ್ತಿದೆ. ಈ ಸಮಸ್ಯೆಗೆ ಪರಿಹಾರವಾಗಿ ಎನ್‌ಜಿಎಸ್ (ಮುಂದಿನ ಪೀಳಿಗೆಯ ಅನುಕ್ರಮ) ಎಂಬ ಅತ್ಯಾಧುನಿಕ ತಂತ್ರಜ್ಞಾನವು ಆಶಾಕಿರಣವಾಗಿದೆ.**

■ ಡಾ. ಶಾಂತಕುಮಾರ ಮುರುಡಾ





ಆಕೆ 5 ವರ್ಷದ ಕಂದಮ್ಮ. ಮೆದುಳಿನಲ್ಲಿ ಒಂದು ರೀತಿಯ ಸೆಳೆತದಿಂದ ಆ ಪುಟ್ಟ ಮಗು ಬಳಲುತ್ತಿತ್ತು. ಎಂಆರ್‌ಐ ಸ್ಕ್ಯಾನಿಂಗ್ ಮಾಡಿಸಿದರು. ಹಲವಾರು ರಕ್ತ ಪರೀಕ್ಷೆಗಳನ್ನೂ ಮಾಡಿಸಲಾಯಿತು. ಆದರೂ ರೋಗ ಯಾವುದು ಅಂತ ಗೊತ್ತಾಗಲೇ ಇಲ್ಲ. ಆಕೆಯ ತಂದೆ, ತಾಯಿ ಸಹ ಹಲವು ವೈದ್ಯರ ಕಡೆ ತೋರಿಸಿದ್ದರು. ವೈದ್ಯಕೀಯ ಲೋಕಕ್ಕೂ ಈ ಪ್ರಕರಣ ಸವಾಲು ಆಗಿತ್ತು. ಎಷ್ಟೇ ಪ್ರಯತ್ನ ಮಾಡಿದರೂ ರೋಗ ಯಾವುದೆಂದು ಗೊತ್ತೇ ಆಗಿಲಿಲ್ಲ. ಪೋಷಕರಿಗೂ ದಿಕ್ಕು ತೋಚದಂತೆ ಆಗಿತ್ತು. ಕೊನೆಗೆ ವೈದ್ಯರು ಎನ್‌ಜಿಎಸ್ ಪರೀಕ್ಷೆ ಮಾಡಿಸಿ ನೋಡಿ... ಏನಾದರೂ ಫಲಿತಾಂಶಗಳು ಸಿಗಬಹುದು ಅಂತ ಸಲಹೆಯನ್ನು ಕೊಟ್ಟಿದ್ದರು.

ಎನ್‌ಜಿಎಸ್ ವಿಸ್ತೃತ ಅರ್ಥ ನೆಕ್ಸ್ಟ್ ಜನರೇಷನ್ ಸೀಕ್ವೆನ್ಸಿಂಗ್. ಇದು ಹೊಸ ಮಾದರಿಯ ರೋಗ ಪತ್ತೆಯ ವಿಧಾನ. ಈ ಪರೀಕ್ಷೆಗೆ ಕಂದಮ್ಮನನ್ನು ಒಳಪಡಿಸಲಾಯಿತು. ಅಲ್ಲಿ ಜೆನೆಟಿಕ್ ಮ್ಯುಟೇಷನ್‌ನ ಒಂದು ರೂಪಾಂತರವನ್ನು ಪರೀಕ್ಷೆಯಲ್ಲಿ ಪತ್ತೆ ಹಚ್ಚಲಾಯಿತು. ಜೀನ್ ಡಿಫೆಕ್ಟ್ ಇರೋದು ಆ ವಿಧಾನದಿಂದ ಗೊತ್ತಾಯಿತು. ಆ ಜೀನ್ ಯಾವುದೆಂದರೆ, ಜಿಎಲ್‌ಯುಟಿ1 ಡಿಎಸ್ (GLUT1DS). ಇದು ತುಂಬಾ ಅಂದರೆ ಅತೀ ವಿರಳವಾದಂತಹ ರೋಗವಾಗಿತ್ತು. ಪತ್ತೆ ಹಚ್ಚಿದ ನಂತರ ಕೀಟೋಜೆನಿಕ್ (Ketogenic Diet) ಡಯಟ್ ಚಿಕಿತ್ಸೆ ಕೊಡೋದಕ್ಕೆ ವೈದ್ಯರಿಗೆ ಸಾಧ್ಯವಾಯಿತು. ಬಳಿಕ ಆ ಮಗುವಿನ ಆರೋಗ್ಯದಲ್ಲಿ